

جامعة الهند الإسلامية
JAMIATHUL HIND AL ISLAMIYYA

• Admission Guide 2025

ಜಾಮಿಯತುಲ್ ಹಿಂದ್ ಅಲ್-ಇಸ್ಲಾಮಿಯ್ಯಾ

# ಕನಸಿನ ಶಿಕ್ಷಣದ ದಾರಿದೀಪ




ಆತ್ಮೀಯ ವಿದ್ಯಾರ್ಥಿಗಳೇ,

ಜ್ಞಾನವು ಅಮೂಲ್ಯವಾದ ಸಂಪತ್ತಾಗಿದೆ.ವಿದ್ಯೆಯೊಂದಿಗೆ ಅಗಾಧ ಸಂಬಂಧವನ್ನು ಹೊಂದಿದವರಿಗೆ ಮಾತ್ರ ಸಮಾಜದಲ್ಲಿ ಪರಿವರ್ತನೆಯನ್ನು ಉಂಟುಮಾಡಲು ಸಾಧ್ಯ. ಮುಂಬರುವ ಸಮೂಹಕ್ಕೆ ನೇತೃತ್ವವನ್ನು ನೀಡಬೇಕಾದವರು,ದೊಡ್ಡ ದೊಡ್ಡ ಕನಸುಗಳನ್ನು ಕಂಡು ಅದನ್ನು ಸಾಕ್ಷಾತ್ಕಾರಗೊಳಿಸಬೇಕಾದವರು ನೀವಾಗಿದ್ದೀರಿ.ಜಗತ್ತು ಯಾವಾಗಲೂ ಉಲಮಾಗಳಿಂದ ಸ್ಪಷ್ಟ ಮಾರ್ಗನಿರ್ದೇಶನಗಳನ್ನು ಬಯಸುತ್ತದೆ.ಕಠಿಣ ಪರಿಶ್ರಮದ ಮೂಲಕ ತಮ್ಮ ಕರ್ತವ್ಯಗಳನ್ನು ಅರ್ಥಮಾಡಿಕೊಂಡು ಸಾಮರ್ಥ್ಯವನ್ನು ಸ್ವಾಯತ್ತಗೊಳಿಸಬೇಕಾದ ಅವಶ್ಯಕತೆ ನಿಮಗಿದೆ.ಸಮಯವನ್ನು ಸರಿಯಾಗಿ ಉಪಯೋಗಿಸಿಕೊಂಡು ಕುಟುಂಬ,ರಾಷ್ಟ್ರ ಮತ್ತು ಸಮಾಜಕ್ಕೆ ನೀವು ಹೆಮ್ಮೆಯಾಗಬೇಕಿದೆ.

ನಮ್ಮೆಡೆಯಲ್ಲಿ ಜ್ಞಾನಾರ್ಜನೆಗೆ ಅವಕಾಶವೇ ಸಿಗದ ಜನರಿದ್ದಾರೆ,ಅವರ ಕಡೆ ನಾವು ತಲುಪಬೇಕು. ಅದಕ್ಕಾಗಿ ನಾವು ಚೆನ್ನಾಗಿ ಕಲಿಯಬೇಕಾಗಿದೆ. ಸಮಸ್ತ ಕೇರಳ ಜಂಇಯ್ಯತುಲ್ ಉಲಮಾ,ಜಾಮಿಯತುಲ್ ಹಿಂದ್ ಅಲ್-ಇಸ್ಲಾಮಿಯಾದ ಮೂಲಕ ಸಮಗ್ರ ಸಮನ್ವಯ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಭವಿಷ್ಯವನ್ನು ಗುರಿಯಾಗಿಸಿಕೊಂಡಿದೆ.'ಏಕ ಜಾಲಗ' ವ್ಯವಸ್ಥೆಯ ಮೂಲಕ ಕೇರಳ ಮತ್ತು ಇತರ ರಾಷ್ಟ್ರಗಳಲ್ಲಿರುವ 300 ಕ್ಕೂ ಹೆಚ್ಚು ಸಂಸ್ಥೆಗಳಲ್ಲಿ ನಿಮ್ಮ ಅಭಿರುಚಿಗೆ ತಕ್ಕಂತಹ ಕಾಲೇಜಿಗೆ ಪ್ರವೇಶವನ್ನು ಪಡೆಯಬಹುದು.ಪ್ರಸ್ತುತ ಕ್ಯಾಂಪಸ್‌ಗಳಲ್ಲಿ ಆಳವಾದ ಧಾರ್ಮಿಕ ಶಿಕ್ಷಣ ಮತ್ತು ಭೌತಿಕ ಅಧ್ಯಯನವನ್ನು ಜಾಮಿಯತುಲ್ ಹಿಂದ್ ನೀಡುತ್ತಿದೆ. ಜಾಗತಿಕ ಮಟ್ಟದಲ್ಲಿ ಸಮೂಹ ಮತ್ತು ಸಮುದಾಯವನ್ನು ಮುನ್ನಡೆಸುವಂತಹ ವಿದ್ವಾಂಸರನ್ನು ಸೃಷ್ಟಿಸುವ ಪಠ್ಯಕ್ರಮ ಹಾಗೂ ಕರಿಕ್ಯುಲಮ್ ಈ ವ್ಯವಸ್ಥೆಯಲ್ಲಿದೆ.ಉಪನ್ಯಾಸಗಳು, ಬರವಣಿಗೆ, ಸಂಶೋಧನೆ,



ಭಾಷಾ ಅಧ್ಯಯನಗಳು ಮತ್ತು ಉತ್ತಮವಾಗಿ ಕಲಿಯುವವರಿಗೆ ಅಗತ್ಯವಿರುವಂತಹ ಎಲ್ಲವನ್ನೂ ಇಲ್ಲಿ ನೀಡಲಾಗುವುದು.

ಸಮನ್ವಯ ಶಿಕ್ಷಣದ ಪ್ರಗತಿಯ ಧ್ವಜಧಾರಿಗಳಾಗಿ,ನಮ್ಮ ದಅವಾ ಕ್ಯಾಂಪಸ್‌ಗಳು ಸೃಷ್ಟಿಸಿದ ಐತಿಹಾಸಿಕ ಕಾರ್ಯಕ್ರಮಗಳು ನಮ್ಮ ಮುಂದಿವೆ. 'ಏಕ  ಜಾಲಗ' ವ್ಯವಸ್ಥೆಯ ಮೂಲಕ ನಿಮ್ಮ ಕನಸು, ಭವಿಷ್ಯ, ಭರವಸೆ ಮತ್ತು ಆಸಕ್ತಿಗಳನ್ನು ಒಗ್ಗೂಡಿಸುವ ಸಮನ್ವಯ ವಿದ್ಯಾಲಯಗಳಲ್ಲೊಂದರಲ್ಲಿ ನಿಮಗೆ ಪ್ರವೇಶಾತಿಯನ್ನು ಪಡೆಯಬಹುದು. ಪ್ರತಿಯೊಬ್ಬ ವಿದ್ಯಾರ್ಥಿಗೂ ತನ್ನ ಸಮುದಾಯದ ಮೇಲೆ ಹಲವಾರು ಜವಾಬ್ದಾರಿಗಳಿವೆ.ಪರಿಶ್ರಮಿಸುವವರಿಗೆ ಯಶಸ್ಸು ಖಂಡಿತ ಸಿಗುತ್ತದೆ - ಇನ್ಶಾ ಅಲ್ಲಾಹ್...

ಅಲ್ಲಾಹನು ತೌಫೀಕ್ ನೀಡಲಿ. ಆಮೀನ್



**ಇ. ಸುಲೈಮಾನ್ ಮುಸ್ಲಿಯಾರ್**
ಚಾನ್ಸಲರ್

**ಕಾಂತಪುರಂ ಎ.ಪಿ. ಅಬೂಬಕರ್ ಮುಸ್ಲಿಯಾರ್**
ವೈಸ್ ಚಾನ್ಸಲರ್

**ಸಯ್ಯಿದ್ ಇಬ್ರಾಹಿಂ ಖಲೀಲ್ ಅಲ್ ಬುಖಾರಿ**
ರಿಜಿಸ್ಟ್ರಾರ್

جـــامــــعة الـــهند الإســــلامـــية
JAMIATHUL HIND AL ISLAMIYYA

ಸಮಸ್ತ ಕೇರಳ ಜಂಇಯ್ಯತುಲ್ ಉಲಮಾದ ಅಧೀನದಲ್ಲಿರುವ ಭಾರತದ ಅತಿದೊಡ್ಡ ಅಫಿಲಿಯೇಟಿಂಗ್ ಇಸ್ಲಾಮಿಕ್ ವಿಶ್ವವಿದ್ಯಾಲಯವಾಗಿದೆ ಜಾಮಿಯತುಲ್ ಹಿಂದ್ ಅಲ್-ಇಸ್ಲಾಮಿಯಾ.

ಕೇರಳ ಮತ್ತು ಇತರ ಪ್ರದೇಶಗಳಲ್ಲಾಗಿ 300 ಕ್ಕೂ ಹೆಚ್ಚು ಸಂಯೋಜಿತ ಕಾಲೇಜುಗಳು,10 ಸಾವಿರಕ್ಕೂ ಮಿಕ್ಕ ವಿದ್ಯಾರ್ಥಿಗಳು,4000 ಅಲುಮ್ನೀ, 2000+ ಮುದರ್ರಿಸ್ ಗಳು ಮತ್ತು ಅಧ್ಯಾಪಕರು,40+ ಪಬ್ಲಿಕೇಶನ್ಸ್, 3000 ಹಾದಿ ಮತ್ತು ಮುಹ್ ತದಿ ಬಿರುದುದಾರಿಗಳು. ನವ ವಿದ್ಯಾರ್ಥಿಗಳ ಪ್ರಗತಿಗಾಗಿ ಸಜ್ಜೀಕರಿಸಲ್ಪಟ್ಟ ಅತ್ಯಾಧುನಿಕ ಕಲಿಕೆಯ ಮಾದರಿಯಾಗಿದೆ ಜಾಮಿಯತುಲ್ ಹಿಂದ್.

---

## ಯಾಕಾಗಿ ಜಾಮಿಯತುಲ್ ಹಿಂದ್ ?

1. ಸಮಸ್ತ ಕೇರಳ ಜಂಇಯ್ಯತುಲ್ ಉಲಮಾದ ಆಶಯ ಮತ್ತು ನಿರ್ದೇಶಗಳನುಸಾರವಾಗಿ ಕಾರ್ಯನಿರ್ವಹಿಸುತ್ತಿರುವ ಕೇರಳದ ಒಳಗೂ ಹೊರಗೂ ಇರುವ ಕ್ಯಾಂಪಸ್‌ಗಳು ಜಾಮಿಯತುಲ್ ಹಿಂದ್ ನ ಕೆಳಗೆ ಅಫ್ಲಿಯೇಟಾಗಿ ಕಾರ್ಯಾಚರಿಸುತ್ತಿದೆ.
2. ಪ್ರವೇಶಾತಿ, ಪಠ್ಯಕ್ರಮ ಮತ್ತು ಪರೀಕ್ಷೆಯಂತಹ ಎಲ್ಲಾ ಶೈಕ್ಷಣಿಕ ವಿಷಯಗಳಿಗೆ ಜಾಮಿಯತುಲ್ ಹಿಂದ್ ನೇರವಾಗಿ ನೇತೃತ್ವವನ್ನು ನೀಡುತ್ತದೆ.
3. ಪ್ರತೀ ಕಾಲೇಜಿನಲ್ಲಿ ಇಸ್ಲಾಮಿಕ್ ವಿಷಯಗಳಲ್ಲಿ ಅಧಿಕೃತ ಮತ್ತು ಆಳವಾದ ಪಠ್ಯಕ್ರಮ ಮತ್ತು ಸಿಲಬಸ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
4. ಇಸ್ಲಾಮಿಕ್ ಫೌಂಡೇಶನ್ ಕೋರ್ಸ್‌ಗಳಿಂದ ಹಿಡಿದು ಸಂಶೋಧನಾ ಅಧ್ಯಯನಗಳು ಸಹ ವಿದ್ಯಾರ್ಥಿಗಳಿಗೆ ಲಭ್ಯವಿದೆ. ಸಂಶೋಧನಾ ಕೋರ್ಸ್‌ಗಳಿಗೆ ಹೆಚ್ಚಿನ ಫೆಲೋಶಿಪ್‌ಗಳನ್ನು ಸಹ ನೀಡಲಾಗುತ್ತದೆ.



5. ಧಾರ್ಮಿಕ ಮತ್ತು ಲೌಕಿಕ ಸಮನ್ವಯ ಶಿಕ್ಷಣದ ಅತ್ಯುತ್ತಮ ಸಂಯೋಜಿತ ಮಾದರಿಯನ್ನು ಜಾಮಿಯತುಲ್ ಹಿಂದ್ ಪ್ರಸ್ತುತಪಡಿಸುತ್ತಿದೆ.

6. 7 ನೇ ತರಗತಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ, ಲೌಕಿಕ ಅಧ್ಯಯನದಲ್ಲಿ 8ನೇ ತರಗತಿಯಿಂದ Ph.D ವರೆಗೂ, ಧಾರ್ಮಿಕ ಅಧ್ಯಯನದಲ್ಲಿ ಫೌಂಡೇಶನ್‌ನಿಂದ ಮುತವ್ವಲ್, ತಖಸ್ಸುಸ್-ದಕ್ತೂರ ವರೆಗೂ ಕಲಿಯಲು ಅವಕಾಶವಿದೆ.

7. 10ನೇ ತರಗತಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಲೌಕಿಕ ಅಧ್ಯಯನದಲ್ಲಿ ಪ್ಲಸ್ ಒನ್‌ನಿಂದ ಪಿಎಚ್‌ಡಿ ವರೆಗೂ, ಧಾರ್ಮಿಕ ಅಧ್ಯಯನದಲ್ಲಿ ಫೌಂಡೇಶನ್‌ನಿಂದ ಮುತವ್ವಲ್, ತಖಸ್ಸಸ್-ದಕ್ತೂರವರೆಗೂ ಕಲಿಯಲು ಅವಕಾಶವಿದೆ.

8. ಫೌಂಡೇಶನ್ (ಶಾಲೆ 8ನೇ ತರಗತಿಯಿಂದ) ಇಂಟರ್ ಮೀಡಿಯೇಟ್ (ಪ್ಲಸ್ ಒನ್ ನಿಂದ) ತರಗತಿಗಳಿಗೆ ಪ್ರವೇಶಾತಿಯು ಏಕ ಜಾಲಗ ವ್ಯವಸ್ಥೆಯ ಮೂಲಕವಾಗಿದೆ. ಪಿಜಿ ಮತ್ತು ಸಂಶೋಧನಾ ಕೋರ್ಸ್‌ಗಳಿಗೆ ನೇರ ಪ್ರವೇಶಾತಿಯಿದೆ.

9. ಮಲಯಾಳಂ, ಅರೇಬಿಕ್, ಉರ್ದು, ಇಂಗ್ಲಿಷ್, ಹಿಂದಿ, ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ಬೋಧನೆ ಮತ್ತು ಕಲಿಕೆಯ ಜೊತೆಗೆ ಅನೇಕ ವಿದೇಶೀ ಭಾಷೆಗಳನ್ನು ಕಲಿಯುವ ಸೌಲಭ್ಯಗಳನ್ನು ವಿವಿಧ ಕ್ಯಾಂಪಸ್‌ಗಳಲ್ಲಾಗಿ ಆಯೋಜಿಸಲಾಗಿದೆ.

10. ಎಲ್ಲಾ ಹಂತದ ವಿದ್ಯಾರ್ಥಿಗಳಿಗೂ ಕಲಿಯುವ ಅವಕಾಶವನ್ನು ಒದಗಿಸುವ ರೀತಿಯಲ್ಲಿ ಪಠ್ಯಕ್ರಮಗಳನ್ನು ಮತ್ತು ವೈಜ್ಞಾನಿಕ ಅಧ್ಯಯನ ಯೋಜನೆಗಳನ್ನು ಸಿದ್ಧಪಡಿಸಲಾಗಿದೆ.

11. ಜಾಗತಿಕ ವಿದ್ವಾಂಸರನ್ನು ಸೃಷ್ಟಿಸುವ ಮಹತ್ತರ ಗುರಿಯೊಂದಿಗೆ ವಿನೂತನ ಯೋಜನೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.


12. ಪಠ್ಯೇತರ ವಿಷಯಗಳಿಗಾಗಿ ವಿಶೇಷ ಕಾರ್ಯಕ್ರಮಗಳು, ತರಬೇತಿಗಳು ಮತ್ತು ಸಾಹಿತ್ಯ ಸ್ಪರ್ಧೆಗಳನ್ನು ಜಾಮಿಯತುಲ್ ಹಿಂದ್ ಆಯೋಜಿಸುತ್ತದೆ. ಕ್ಯಾಂಪಸ್‌ಗಳು ಪ್ರತಿಭೆಯನ್ನು ಪ್ರದರ್ಶಿಸಲು ಅನುಕೂಲವಾಗುವಂತಹ ನವೀನ ಕಾರ್ಯಕ್ರಮಗಳನ್ನು ಸಿದ್ಧಪಡಿಸುತ್ತದೆ.

13. ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಶಿಕ್ಷಣವನ್ನು ನೀಡುವುದರ ಜೊತೆಗೆ ಮೆರಿಟ್-ಕಮ್-ಮೀನ್ಸ್ ವಿದ್ಯಾರ್ಥಿವೇತನಗಳು, ಸಂಶೋಧನಾ ಫೆಲೋಶಿಪ್‌ಗಳು ಮತ್ತು ಸಂಶೋಧನಾ ಪ್ರೋಜೆಕ್ಟ್‌ಗಳಿಗೆ ಅವಕಾಶಗಳನ್ನು ನೀಡಲಾಗುತ್ತದೆ.

14. ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮಗಳು, ವಿದ್ಯಾರ್ಥಿಗಳ ಪುಷ್ಟೀಕರಣ ಕಾರ್ಯಕ್ರಮಗಳು, ಸುಧಾರಿತ ನಾಯಕತ್ವ ತರಬೇತಿಗಳು, ಜಾಗತಿಕ ಭಾಷಾ ಮಾಸ್ಟರಿ ಕೋರ್ಸ್‌ಗಳು, ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ವಿನಿಮಯ ಕಾರ್ಯಕ್ರಮಗಳ ಜೊತೆಗೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಸ್ಪರ್ಧೆಗಳು ಮತ್ತು ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಶ್ಯಕವಾದ ಎಲ್ಲಾ ತರಬೇತಿಯನ್ನು ಇಲ್ಲಿ ನೀಡಲಾಗುತ್ತದೆ.

15. ಪ್ರತಿಭಾ ಪರೀಕ್ಷೆಗಳು, ಎಕ್ಸಲೆನ್ಸ್ ಪ್ರಶಸ್ತಿಗಳು, ವಾರ್ಷಿಕ ಜಾಮಿಯಾ ಮಹರ್ಜಾನ್,ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಶ್ವವಿದ್ಯಾಲಯಗಳೊಂದಿಗೆ ಶೈಕ್ಷಣಿಕ ಸಂಯೋಜಿತ ಕಾರ್ಯಕ್ರಮಗಳು.

16. ಸಿವಿಲ್ ಸರ್ವೀಸ್ ಪರೀಕ್ಷೆಗಳಿಗಿರುವ ಫೌಂಡೇಶನ್ ಕೋರ್ಸ್‌ಗಳು, ಇಂಟೆನ್ಸಿವ್ ಕೋರ್ಸ್‌ಗಳು, ನೆಟ್/ಜೆಆರ್‌ಎಫ್ ಪರೀಕ್ಷೆಗಳಿಗೆ ವಿಶೇಷ ತರಬೇತಿ, ರಾಷ್ಟ್ರೀಯ,ಅಂತರಾಷ್ಟ್ರೀಯ ವಿಶ್ವವಿದ್ಯಾಲಯಗಳಲ್ಲಿ ಉತ್ತಮ ವಿದ್ಯಾಭ್ಯಾಸಕ್ಕಾಗಿ ವಿಶೇಷ ತರಬೇತಿ. ವಿದ್ಯಾರ್ಥಿಗಳನ್ನು ಉನ್ನತ ಸ್ಥಾನಕ್ಕೆ ತಲುಪಿಸಲು ಸಹಾಯಕವಾದ ತರಬೇತಿಗಳನ್ನು ವಿವಿಧ ಸಂಸ್ಥೆಗಳಲ್ಲಾಗಿ ಏರ್ಪಡಿಸಲಾಗುತ್ತದೆ.




# ಏಕ ಜಾಲಗ ಪ್ರವೇಶಾತಿ

8 ಮತ್ತು 11ನೇ ತರಗತಿಗಳಿಗೆ ಜಾಮಿಯತುಲ್ ಹಿಂದ್ ಏಕ ಜಾಲಗ ವ್ಯವಸ್ಥೆಯ ಮೂಲಕ ಪ್ರವೇಶಾತಿ ನೀಡಲಾಗುತ್ತದೆ.ಒಂದೇ ಅರ್ಜಿ ಮತ್ತು ಪರೀಕ್ಷೆಯ ಮೂಲಕ ಜಾಮಿಯತುಲ್ ಹಿಂದ್ ನ ಕೆಳಗೆ ಕಾರ್ಯನಿರ್ವಹಿಸುತ್ತಿರುವ 300 ಕ್ಕೂ ಹೆಚ್ಚು ಸಂಸ್ಥೆಗಳಲ್ಲಿ ಪ್ರವೇಶಾತಿ ಪಡೆಯಬಹುದು.ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗುವುದು. ನಂತರ ಲಿಖಿತ ಪರೀಕ್ಷೆ ಮತ್ತು ಇಂಟರ್ವ್ಯೂ ನಡೆಯಲಿದೆ.ಪ್ರಥಮ,ದ್ವಿತೀಯ ಮತ್ತು ಸ್ಪಾಟ್ ಅಲೌಟ್‌ಮೆಂಟ್‌ಗಳ ಮೂಲಕ ವಿದ್ಯಾರ್ಥಿಗಳಿಗೆ ತಮ್ಮಿಚ್ಛೆಯ  ಸಂಸ್ಥೆಗಳನ್ನು ಆಯ್ಕೆ ಮಾಡಬಹುದು. ಲಿಖಿತ ಪರೀಕ್ಷೆ, ಇಂಟರ್ವ್ಯೂ ಮತ್ತು ಇತರ ಗ್ರೇಸ್ ಅಂಕಗಳನ್ನು ನೋಡಿಯಾಗಿದೆ ರ್‍ಯಾಂಕ್ ಪಟ್ಟಿಯನ್ನು ತಯಾರಿಸುವುದು ಮತ್ತು ಆದ್ಯತೆಯ ಸಂಸ್ಥೆಗಳಲ್ಲಿ ಪ್ರವೇಶಾತಿ ಪಡೆಯಲು ಆಯ್ಕೆ ಕೊಡುವುದು.



# ಕೋರ್ಸ್‌ಗಳು

ಆಳವಾದ ಇಸ್ಲಾಮಿಕ್  ಮತ್ತು ಭೌತಿಕ ಅಧ್ಯಯನಗಳನ್ನು ಸಂಯೋಜಿತವಾಗಿ ನೀಡುವ ಆಧುನಿಕ ಮತ್ತು ವಿಭಿನ್ನ ಕೋರ್ಸ್‌ಗಳನ್ನಾಗಿದೆ ಜಾಮಿಯತುಲ್ ಹಿಂದ್ ನೀಡುತ್ತಿರುವುದು.

1. Foundational & Intermediate Programs
2. Bachelor's Programs
3. Master's Programs
4. Research Programs and Projects
5. Advanced Post Graduate Diploma Courses
6. Short-run Courses and Certificate Programs

ಜಾಮಿಯತುಲ್ ಹಿಂದ್ ವೆಬ್‌ಸೈಟ್‌ನಲ್ಲಿ ಪಠ್ಯಕ್ರಮ ಲಭ್ಯವಿದೆ

jamiathulhind.com/syllabus

## 7ನೇ ತರಗತಿ ಉತ್ತೀರ್ಣರಾದವರಿಗೆ

7 ನೇ ತರಗತಿಯಲ್ಲಿ ಉತ್ತೀರ್ಣರಾದವರಿಗೆ ಮುಂದಿನ ಶಾಲಾ ಶಿಕ್ಷಣದೊಂದಿಗೆ ಪ್ಲಸ್ ಟು, ಪದವಿ, ಪಿಜಿ, ಪಿಎಚ್‌ಡಿ ವರೆಗೆ ಅಧ್ಯಯನ ಮಾಡಲು ಮತ್ತು ಧಾರ್ಮಿಕ ಶಿಕ್ಷಣ ಫೌಂಡೇಶನ್‌ನಿಂದ ಮುತವ್ವಲ್ (ಪಿಜಿ) ವರೆಗೂ ಕಲಿಯಬಹುದು.

## 10 ನೇ ತರಗತಿ ಉತ್ತೀರ್ಣರಾದವರಿಗೆ

ಶಾಲಾ ಶಿಕ್ಷಣದ 10 ನೇ ತರಗತಿಯಲ್ಲಿ ಉತ್ತೀರ್ಣರಾದವರು ಪ್ಲಸ್ ಟು, ಪದವಿ, ಪಿಜಿ, ಪಿಎಚ್‌ಡಿ ಜೊತೆಗೆ ಸಾಂಪ್ರದಾಯಿಕ ಧಾರ್ಮಿಕ ಅಧ್ಯಯನವನ್ನು ಫೌಂಡೇಶನ್ ನಿಂದ ಮುತವ್ವಲ್ (ಪಿಜಿ) ವರೆಗೆ ಕಲಿಯಬಹುದು. ಹೆಚ್ಚಿನ ಅಧ್ಯಯನಕ್ಕೂ ಅವಕಾಶವಿದೆ.

ಧಾರ್ಮಿಕ ವಿದ್ಯಾಭ್ಯಾಸವು ಎಲ್ಲಾ ಸಂಸ್ಥೆಗಳಲ್ಲೂ ಜಾಮಿಯತುಲ್ ಹಿಂದ್ ಪಠ್ಯಕ್ರಮವನ್ನಾಗಿದೆ ಅಳವಡಿಸಿಕೊಳ್ಳುತ್ತಿರುವುದು.ಅದೇ ವೇಳೆ ಭೌತಿಕ ವಿದ್ಯಾಭ್ಯಾಸಕ್ಕಾಗಿ ವಿವಿಧ ಸಂಸ್ಥೆಗಳು ವಿಭಿನ್ನ ವಿಧಾನಗಳನ್ನು ಅಳವಡಿಸಿಕೊಂಡಿದೆ.ರೆಗ್ಯುಲರ್, ಡಿಸ್ಟೆಂಸ್, ಓಪನ್, ಪ್ರೈವೇಟ್, ಇಂಗ್ಲಿಷ್ ಮಾಧ್ಯಮ, ಇತರ ಭಾಷಾ ಮಾಧ್ಯಮಗಳು, ಕೇರಳ, CBSE, ಇನ್ನಿತರ ಪಠ್ಯಕ್ರಮಗಳು, ವ್ಯತ್ಯಸ್ಥ ವಿಶ್ವವಿದ್ಯಾನಿಲಯಗಳು ಹೀಗೆ  ಹಲವಾರು ಕಾರ್ಯಕ್ರಮಗಳು ವಿವಿಧ ಕ್ಯಾಂಪಸ್‌ಗಳಲ್ಲಾಗಿ ಲಭ್ಯವಾಗಲಿದೆ.

ಸಯನ್ಸ್,ಕೋಮರ್ಸ್,ಹ್ಯುಮಾನಿಟೀಸ್ ಸೇರಿದಂತೆ ಆಯಾ ರಾಜ್ಯಗಳು ನೀಡುವ ಹಯ್ಯರ್ ಸೆಕೆಂಡರಿ / ಪ್ರೀ ಯುನಿವರ್ಸಿಟಿ  ಕೋರ್ಸ್‌ಗಳು ಮತ್ತು ಅವುಗಳ ವಿಭಿನ್ನ ಸಂಯೋಜನೆಗಳು ವಿವಿಧ ಸಂಸ್ಥೆಗಳಲ್ಲಾಗಿ ನೀಡಲಾಗುತ್ತದೆ. ಪದವಿ ಮತ್ತು ಪಿಜಿ ಹಂತದಲ್ಲೂ ಆಯ್ಕೆಗಳಿವೆ.ಪ್ರತೀ ಸಂಸ್ಥೆಯು ನೀಡುವ ಅಧ್ಯಯನದ ವಿಧಾನವನ್ನು ವಿದ್ಯಾರ್ಥಿಗಳು ಮತ್ತು ಪೋಷಕರು ಪ್ರತ್ಯೇಕವಾಗಿ ಅರ್ಥಮಾಡಿಕೊಂಡು  ಆಯಾ ಸಂಸ್ಥೆಗಳನ್ನು ಸಂಪರ್ಕಿಸುವ ಮೂಲಕ ಅದನ್ನು ದೃಢೀಕರಿಸಬೇಕಾದ ಅವಶ್ಯಕತೆ ಇದೆ.ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸಂಸ್ಥೆಯನ್ನು ಆಯ್ಕೆಮಾಡುವಾಗ ಇದನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ.

## ಕ್ಯಾಂಪಸ್‌ಗಳು

**ಏಕ ಜಾಲಗ ವ್ಯವಸ್ಥೆಯ ಮೂಲಕ ವಿದ್ಯಾರ್ಥಿಯು ಅರ್ಜಿ ಸಲ್ಲಿಸುವಾಗ, ತನ್ನ ಆದ್ಯತೆಗೆ ಅನುಗುಣವಾಗಿ ಹತ್ತು ಸಂಸ್ಥೆಗಳು/ಕಾಲೇಜುಗಳನ್ನು ಆಯ್ಕೆ ಮಾಡಬೇಕು.**

ಯಾವ ಸಂಸ್ಥೆಯಲ್ಲಿ  ಕಲಿಯಲು ಅವನಿಚ್ಚಿಸುತ್ತಾನೆ ಅದನ್ನು ಮೊದಲು ಆಯ್ಕೆ ಮಾಡಿ ಅದು  ಲಭ್ಯವಿಲ್ಲದಿದ್ದರೆ ಯಾವ ಸಂಸ್ಥೆಯಲ್ಲಿ ಕಲಿಯಬೇಕು ಅದನ್ನು ಎರಡನೇಯದಾಗಿ ಆಯ್ಕೆ ಮಾಡಿ ಅದೂ ಲಭ್ಯವಾಗದಿದ್ದರೆ ಕಲಿಯಲಿಚ್ಚಿಸುವ

ಸಂಸ್ಥೆಯನ್ನು ಮೂರನೇಯದಾಗಿ ಆಯ್ಕೆ ಮಾಡುವ ರೀತಿಯಲ್ಲಿ ಸೂಕ್ಷ್ಮವಾಗಿ ಗಮನಿಸಿ ಆಯ್ಕೆ ಮಾಡಬೇಕು.

8 ನೇ ತರಗತಿಯಿಂದ PG ವರೆಗೆ ಮತ್ತು ಪ್ಲಸ್ ಒಂದರಿಂದ PG ವರೆಗೆ ಕಲಿಸುವ ಕ್ಯಾಂಪಸ್‌ಗಳು ಹಾಗೂ ಕೇವಲ ಒಂದು ಕೋರ್ಸ್ ಮಾತ್ರ ಇರುವ ಕ್ಯಾಂಪಸ್ ಗಳು ಜಾಮಿಯತುಲ್ ಹಿಂದ್ ನ ಕೆಳಗೆ ಕಾರ್ಯಾಚರಿಸುತ್ತಿದೆ. ಎಲ್ಲಾ ಸಂಸ್ಥೆಗಳೂ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ನೀಡುತ್ತವೆ. ಕೆಲವು ಸಂಸ್ಥೆಗಳು ಪ್ರವೇಶ ಶುಲ್ಕ ಮತ್ತು ಪರೀಕ್ಷಾ ಶುಲ್ಕದಂತಹ ಶುಲ್ಕವನ್ನು ವಿಧಿಸಬಹುದು.ರೆಗ್ಯುಲರ್ ಸ್ಟ್ರೀಮ್ ಮತ್ತು ಇತರ ಸ್ಟ್ರೀಮ್‌ಗಳಲ್ಲಿ ಲೌಖಿಕ ಶಿಕ್ಷಣವನ್ನು ನೀಡಲಾಗುತ್ತದೆ. ಆಹಾರವನ್ನು ಕ್ಯಾಂಟೀನ್ ಮತ್ತು ಇತರ ಸೌಲಭ್ಯಗಳ ಮೂಲಕ ಒದಗಿಸಲಾಗುತ್ತದೆ. ಸಂಕ್ಷಿಪ್ತವಾಗಿ, ಪ್ರತಿ ಸಂಸ್ಥೆಯು ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಸೌಲಭ್ಯಗಳನ್ನು ಒದಗಿಸುತ್ತದೆ. ವಿವಿಧ ಆಡ್-ಆನ್ ಕೋರ್ಸುಗಳು ಮತ್ತು ತರಬೇತಿಗಳು ಪ್ರತೀ ಸಂಸ್ಥೆಯಲ್ಲೂ ವ್ಯತ್ಯಸ್ಥವಾಗಿರುತ್ತದೆ. ವಿದ್ಯಾರ್ಥಿ ಮತ್ತು ಪೋಷಕರು ಸಂಸ್ಥೆಯ ಬಗ್ಗೆ ಎಲ್ಲಾ ಮಾಹಿತಿಯನ್ನು ತಿಳಿದುಕೊಳ್ಳಬೇಕು. ಪ್ರತಿ ಸಂಸ್ಥೆಗೆ ನೇರವಾಗಿ ಭೇಟಿಮಾಡಿ ಅಲ್ಲಿಯ ಕಾರ್ಯ ವೈಖರಿಗಳನ್ನು ಅರ್ಥಮಾಡಿಕೊಳ್ಳಬೇಕು. ಓಪ್ಷನ್ ನೀಡಿ ಆಯ್ಕೆ ಮಾಡಿದ ಸಂಸ್ಥೆಯ ಕುರಿತಾದ ಹೆಚ್ಚಿನ ದೂರುಗಳನ್ನು ಜಾಮಿಯತುಲ್ ಹಿಂದ್ ಪರಿಗಣಿಸುವುದಿಲ್ಲ.

**ಏಕ-ಜಾಲಗ ಪೋರ್ಟಲ್‌ನಲ್ಲಿ ಸಂಸ್ಥೆಗಳನ್ನು ಜಿಲ್ಲಾವಾರು ಮತ್ತು ಕೋರ್ಸ್‌ವಾರುಗಳಾಗಿ ವರ್ಗೀಕರಿಸಲಾಗಿದೆ.ಕ್ಯಾಂಪಸ್‌ಗಳನ್ನು ಸಂಪರ್ಕಿಸಲು ಫೋನ್ ನಂಬರುಗಳು ಸಹ ಲಭ್ಯವಿರುತ್ತವೆ.'**

ಸೌಲಭ್ಯಗಳು ಮತ್ತಿತರ ವಿಷಯಗಳನ್ನು ಅರ್ಥಮಾಡಿಕೊಳ್ಳಲು ನೇರವಾಗಿ ಸಂಸ್ಥೆಗೆ ಭೇಟಿ ನೀಡಬಹುದು.

## ಅರ್ಜಿ ಸಲ್ಲಿಸಲು ಅರ್ಹತೆ

ಶಾಲೆಯಲ್ಲಿ 7ನೇ ತರಗತಿ ಉತ್ತೀರ್ಣರಾದವರಿಗೆ 8ನೇ ತರಗತಿಗೂ ಮತ್ತು 10ನೇ ತರಗತಿ ಉತ್ತೀರ್ಣರಾದವರಿಗೆ ಪ್ಲಸ್ ಒನ್ ಗೂ ಅರ್ಜಿ ಸಲ್ಲಿಸಬಹುದು. ಲೌಕಿಕ ಶಿಕ್ಷಣವನ್ನು ಪೂರ್ಣಗೊಳಿಸಿದ ಧಾರ್ಮಿಕ ವಿದ್ವಾಂಸರನ್ನು ಸೃಷ್ಟಿಸುವ ಧ್ಯೇಯದೊಂದಿಗೆ ಪಠ್ಯಕ್ರಮವನ್ನು ಕ್ರೋಢೀಕರಿಸಿರುವುದರಿಂದ ಎಲ್ಲಾ ಕೋರ್ಸ್‌ಗಳ ಜೊತೆಗೆ ಜಾಮಿಯತುಲ್ ಹಿಂದ್ ಸಿಲಬಸ್ ಪ್ರಕಾರ ಆಳವಾದ ಧಾರ್ಮಿಕ ಅಧ್ಯಯನವು ಕಡ್ಡಾಯವಾಗಿರುತ್ತದೆ.

- **8ನೇ ತರಗತಿಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಜೂನ್ 1, 2010 ರ ನಂತರ ಜನಿಸಿದವರಾಗಿರಬೇಕು**

- **ಪ್ಲಸ್ ಒನ್‌ಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಜೂನ್ 1, 2007 ರ ನಂತರ ಜನಿಸಿದವರಾಗಿರಬೇಕು.**

(ಈ ವಯೋಮಿತಿ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಏಕ ಜಾಲಗ ವ್ಯವಸ್ಥೆಯ ಮೂಲಕ ಪ್ರವೇಶ ನೀಡಲಾಗುವುದಿಲ್ಲ,ಆದರೆ ಜಾಮಿಯತುಲ್ ಹಿಂದ್ ಕಛೇರಿಯ ಮೂಲಕ ಅಧ್ಯಯನದ ವ್ಯವಸ್ಥೆ ಮಾಡಲಾಗುವುದು.ಇದಕ್ಕಾಗಿ ನೇರವಾಗಿ ಕಛೇರಿಯನ್ನು ಸಂಪರ್ಕಿಸಬೇಕು) ಪ್ರಸ್ತುತ ಮುಸ್ಲಿಂ ಹುಡುಗರಿಗೆ ಮಾತ್ರವಾಗಿದೆ ಕೋರ್ಸ್ ಲಭ್ಯವಿರುವುದು.ಕೋರ್ಸ್ ಗಳು ಸಂಪೂರ್ಣವಾಗಿ ವಸತಿಯುತವಾಗಿರುತ್ತವೆ. ಇವುಗಳ ಹೊರತಾಗಿ, ಕೆಲವು ಸಂಸ್ಥೆಗಳು ಖುರಾನ್ ಹಿಫ್ಲ್ ಪೂರ್ತಿಗೊಳಿಸಿರಬೇಕು ಮತ್ತು ವಿದ್ಯಾರ್ಥಿಯು ನಿರ್ದಿಷ್ಟ ಪ್ರದೇಶ/ರಾಜ್ಯದಿಂದ ಮಾತ್ರ ಆಗಿರಬೇಕು ಎಂಬೆಲ್ಲಾ ನಿಯಮಗಳು ಕೆಲವು ಸಂಸ್ಥೆಗಳಲ್ಲಿವೆ. ಅಂತಹ ನಿಯಮಗಳನ್ನು ವಿದ್ಯಾರ್ಥಿಗಳು ಪ್ರತ್ಯೇಕವಾಗಿ ಗಮನಿಸಬೇಕು.

# ಅರ್ಜಿ ಸಲ್ಲಿಸುವಾಗ ಗಮನಿಸಬೇಕಾದ ಅಂಶಗಳು

1. www.jamiathulhind.com ವೆಬ್‌ಸೈಟ್ ಮೂಲಕ ಮಾತ್ರ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ.

2. ಅರ್ಜಿ ಸಲ್ಲಿಸುವ ಮೊದಲು ಅರ್ಹತೆಯನ್ನು ಖಚಿತಪಡಿಸಿಕೊಳ್ಳಿ. ವಿದ್ಯಾರ್ಹತೆಗಳನ್ನು ಪೂರ್ಣಗೊಳಿಸದ ವಿದ್ಯಾರ್ಥಿಗಳು ನೇರವಾಗಿ ಜಾಮಿಯತುಲ್ ಹಿಂದನ್ನು ಸಂಪರ್ಕಿಸಬಹುದು.

3. ಹೆಸರು, ಜನ್ಮದಿನಾಂಕ ಮತ್ತು ಮೊಬೈಲ್ ಸಂಖ್ಯೆಯನ್ನು ನಮೂದಿಸಿ ಮೊದಲು ನೊಂದಾಯಿಸಬೇಕು, ವಾಟ್ಸಾಪ್ ಒಟಿಪಿ ವರಿಫಿಕೇಶನ್ ಇರುತ್ತದೆ.

4. ವಿದ್ಯಾರ್ಥಿಗಳು ಅರ್ಜಿಯಲ್ಲಿ ನಿಖರವಾದ ಮತ್ತು ಸ್ಪಷ್ಟವಾದ ಮಾಹಿತಿಯನ್ನು ಮಾತ್ರ ನೀಡಬೇಕು. ವಿದ್ಯಾರ್ಥಿವೇತನಗಳು, ಫೆಲೋಶಿಪ್‌ಗಳು ಮತ್ತು ಇತರ ಸೃಜನಶೀಲ ಮತ್ತು ಶೈಕ್ಷಣಿಕ ಸಾಧನೆಗಳ ಪ್ರಮಾಣಪತ್ರಗಳನ್ನು ಹೊಂದಿರುವವರು ಮಾತ್ರ ಆ ಅಂಕಣಗಳನ್ನು ಭರ್ತಿ ಮಾಡಬೇಕು. ಇಂಟರ್ವ್ಯೂ ಸಮಯದಲ್ಲಿ ಎಲ್ಲಾ ದಾಖಲೆಗಳು ಮತ್ತು ಪ್ರಮಾಣಪತ್ರಗಳನ್ನು ಹಾಜರುಪಡಿಸುವ ವಿದ್ಯಾರ್ಥಿಗಳನ್ನು ಮಾತ್ರ ಗ್ರೇಸ್ ಅಂಕಗಳಿಗೆ ಪರಿಗಣಿಸಲಾಗುತ್ತದೆ.

5. ಅರ್ಜಿ ಶುಲ್ಕ ರೂ.300 ಆಗಿರುತ್ತದೆ. ಶುಲ್ಕವನ್ನು ಆನ್‌ಲೈನ್‌ನಲ್ಲಿ ಪಾವತಿಸಬೇಕು.


6. ಪ್ರವೇಶ ಪರೀಕ್ಷೆ ಮತ್ತು ಇಂಟರ್ವ್ಯೂ ಒಂದೇ ದಿನ ಒಂದೇ ಕೇಂದ್ರದಲ್ಲಿ ನಡೆಯಲಿದೆ. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ವಿದ್ಯಾರ್ಥಿಯು ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಬೇಕು. ನಂತರ ಕೇಂದ್ರವನ್ನು ಬದಲಾಯಿಸಲು ಸಾಧ್ಯವಿಲ್ಲ.

7. ಪ್ರತಿಯೊಬ್ಬ ವಿದ್ಯಾರ್ಥಿಯು ಹತ್ತು ಸಂಸ್ಥೆಗಳನ್ನು ಆದ್ಯತೆಗೆ ಅನುಗುಣವಾಗಿ ಆಯ್ಕೆ ಮಾಡಬೇಕು. ಈ ಸಂಸ್ಥೆಗಳಿಗೆ ಪ್ರವೇಶಾತಿಯು ರ್‍ಯಾಂಕ್ ಆಧಾರದ ಮೇಲೆ ಇರುತ್ತದೆ.ಮೊದಲ ಅಲೋಟ್ ಮೆಂಟಲ್ ನ ಬಳಿಕ ಸಂಸ್ಥೆಗಳ ಆಯ್ಕೆಗಳನ್ನು ಬದಲಾಯಿಸಬಹುದು. ಸಂಸ್ಥೆಯನ್ನು ಆಯ್ಕೆಮಾಡುವ ಮುಂಚೆ ಆ ಸಂಸ್ಥೆಯ ಕುರಿತು ಎಲ್ಲಾ ಮಾಹಿತಿಗಳನ್ನು ತಿಳಿದುಕೊಂಡಿರಬೇಕು.

8. ಹಾಲ್ ಟಿಕೆಟ್ ಮತ್ತು ಇತರ ಎಲ್ಲಾ ಪ್ರಮುಖ ಮಾಹಿತಿಗಳನ್ನು ವಿದ್ಯಾರ್ಥಿಗಳು ಏಕ ಜಾಲಗ ಪೋರ್ಟಲ್ ಮುಖಾಂತರ ಪ್ರತ್ಯೇಕವಾಗಿ ಪಡೆಯಬಹುದು. ಬಳಕೆದಾರರ ಹೆಸರು ಮತ್ತು ಪಾಸ್‌ವರ್ಡ್‌ನೊಂದಿಗೆ ಯಾವ ಸಮಯದಲ್ಲೂ ಪೋರ್ಟಲ್‌ಗೆ ಲಾಗಿನ್ ಮಾಡಿ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ .

9. ತಡವಾದ ಮಾಹಿತಿಯಿಂದ ಉಂಟಾಗುವ ಯಾವುದೇ ಅನಾನುಕೂಲತೆಗೂ ಜಾಮಿಯತುಲ್ ಹಿಂದ್ ಜವಾಬ್ದಾರಿಯಾಗುವುದಿಲ್ಲ.






# J-SAT

Entrance Examination

## ಪ್ರವೇಶ ಪರೀಕ್ಷೆ, ಇಂಟರ್ವ್ಯೂ (J-SAT)

1. J-SAT ಪರೀಕ್ಷೆಯ ಮೂಲಕವಾಗಿದೆ ಏಕ ಜಾಲಗ ಪ್ರವೇಶಾತಿ ಲಭ್ಯವಾಗುವುದು.
2. ಪ್ರವೇಶ ಪರೀಕ್ಷೆ ಮತ್ತು ಇಂಟರ್ವ್ಯೂ ಒಂದೇ ಕೇಂದ್ರದಲ್ಲಿ ನಡೆಯಲಿದೆ. ಅರ್ಜಿ ಸಲ್ಲಿಸುವ ಸಮಯದಲ್ಲಿ ವಿದ್ಯಾರ್ಥಿಯು ಈ ಕೇಂದ್ರವನ್ನು ಆಯ್ಕೆ ಮಾಡಬೇಕು.
3. ಲಿಖಿತ ಪರೀಕ್ಷೆಯ 75 ಶೇಕಡ ಪ್ರಶ್ನೆಗಳು ಶಾಲಾ ಪಠ್ಯಕ್ರಮವನ್ನು ಆಧರಿಸಿ ಮತ್ತು 25 ಶೇಕಡ ಧಾರ್ಮಿಕ ಪ್ರಶ್ನೆಗಳಾಗಿರುತ್ತದೆ. ಮಾದರಿ ಪ್ರಶ್ನೆ ಪತ್ರಿಕೆ ಜಾಮಿಯತುಲ್ ಹಿಂದ್ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. (ಪ್ರಶ್ನೆಗಳ ನಮೂನೆ, ಅನುಪಾತ ಮತ್ತು ಗುಣಮಟ್ಟವು ಜಾಮಿಯತುಲ್ ಹಿಂದ್ ನಿರ್ಧರಿಸಿದಂತೆ ಇರುತ್ತದೆ)
4. ಲಿಖಿತ ಪರೀಕ್ಷೆ ಮತ್ತು ಇಂಟರ್ವ್ಯೂಗಾಗಿ, ಹಾಲ್ ಟಿಕೆಟ್‌ನಲ್ಲಿ ಸೂಚಿಸಲಾದ ಸಮಯಕ್ಕಿಂತ ಅರ್ಧ ಗಂಟೆ ಮುಂಚೆ ಹಾಜರಾಗಿ ಪರೀಕ್ಷಾ ಸ್ಥಳವನ್ನು ಹುಡುಕಿಟ್ಟಿರಬೇಕು.
5. ಪರೀಕ್ಷೆಯ ಒಂದು ಗಂಟೆಯ ನಂತರ ಬರುವ ವಿದ್ಯಾರ್ಥಿಯು ಅವಕಾಶವನ್ನು ಕಳೆದುಕೊಳ್ಳುತ್ತಾನೆ. ತಡವಾಗಿ ಬರುವವರಿಗೆ ಹೆಚ್ಚುವರಿ ಸಮಯವನ್ನು ಅನುಮತಿಸಲಾಗುವುದಿಲ್ಲ.
6. ಪರೀಕ್ಷೆ ಆರಂಭಿಸಿ ಒಂದು ಗಂಟೆಯ ನಂತರವೇ ಪರೀಕ್ಷಾಕೊಠಡಿಯಿಂದ ಹೊರಹೋಗಲು ಅನುಮತಿಸುವುದು.
7. 100 ಪ್ರಶ್ನೆಗಳು ವಸ್ತುನಿಷ್ಠ ಮಾದರಿಯಾಗಿರುತ್ತದೆ. OMR ಹಾಳೆಯಲ್ಲಿ ಉತ್ತರಗಳನ್ನು ದಾಖಲಿಸಬೇಕು. OMR ಶೀಟ್ನಲ್ಲಿ ಹೇಗೆ ಪರೀಕ್ಷೆ ಬರೆಯಬೇಕೆಂದು ಪರೀಕ್ಷೆಗೂ ಮುನ್ನವೇ ವಿದ್ಯಾರ್ಥಿ ಕಲಿತಿರಬೇಕು.
8. ಮೂರು ಪ್ರಶ್ನೆಗಳನ್ನು ವಾಕ್ಯಗಳಲ್ಲಿ ಬರೆಯಬೇಕಾಗುತ್ತದೆ.
9. ಉತ್ತರಪತ್ರಿಕೆಯನ್ನು ಜಾಮಿಯತುಲ್ ಹಿಂದ್ ನೀಡಲಿದೆ.

10. ನೀಲಿ/ಕಪ್ಪು ಪೆನ್ನು ಮಾತ್ರ ಬಳಸಬೇಕು.ಪೆನ್ನು ವಿದ್ಯಾರ್ಥಿಯೇ ತರಬೇಕು.

11. ಪರೀಕ್ಷಾ ಹಾಲ್ ಪ್ರವೇಶಿಸಲು ಮತ್ತು ಇಂಟರ್ವ್ಯೂ ಗೆ ಹಾಜರಾಗಲು ಹಾಲ್ ಟಿಕೆಟ್ (ಪ್ರಿಂಟ್ ಕಾಪಿ) ಕಡ್ಡಾಯ. ಹಾಲ್ ಟಿಕೆಟನ್ನು ಆನ್‌ಲೈನ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

12. ಪೆನ್ನು, ಸಾಮಾನ್ಯ ವಾಚ್ ಮತ್ತು ಹಾಲ್ ಟಿಕೆಟ್ ಹೊರತುಪಡಿಸಿ ಬೇರೆ ಯಾವುದನ್ನೂ ವಿದ್ಯಾರ್ಥಿಯು ಪರೀಕ್ಷಾ ಕೊಠಡಿಗೆ ತೆಗೆದುಕೊಂಡು ಹೋಗಬಾರದು.

13. ಪರೀಕ್ಷಾ ಹಾಲ್‌ನಲ್ಲಿ ಕ್ಯಾಲ್ಕುಲೇಟರ್‌ಗಳು ಮತ್ತು ಮೊಬೈಲ್ ಫೋನ್‌ಗಳಂತಹ ಎಲ್ಲಾ ಉಪಕರಣಗಳನ್ನು ನಿಷೇಧಿಸಲಾಗಿದೆ.

14. ಇಂಟರ್ವ್ಯೂ ಸಂದರ್ಭದಲ್ಲಿ ಮಾರ್ಕ್‌ಲಿಸ್ಟ್‌ಗಳು, ಹಿಫ್ಳ್ ಪ್ರಮಾಣಪತ್ರ, ಜಾಮಿಯಾ ಮಹಜ್ಜಾನ್, ಎಸ್‌ಎಸ್‌ಎಫ್ ಸಾಹಿತ್ಯೋತ್ಸವ, ಐಎಎಂಇ ಫೆಸ್ಟ್‌ಗಳು, ಸ್ಕೂಲ್ ಕಲೋತ್ಸವಗಳು, ಸ್ಕಾಲರ್ಶಿಪ್ ಗಳು ಮುಂತಾದ ಎಲ್ಲಾ ದಾಖಲೆಗಳ ಮೂಲ ಪ್ರಮಾಣಪತ್ರಗಳನ್ನು ಹಾಜರುಪಡಿಸಬೇಕು ಮತ್ತು ಇಂಟರ್ವ್ಯೂ ನಡೆಸುವವರಿಗೆ ಮನವರಿಕೆ ಮಾಡಿಕೊಡಬೇಕು.

15. ಇಂಟರ್ವ್ಯೂನಲ್ಲಿ ಮುಖ್ಯವಾಗಿ ಓದುವ ಸಾಮರ್ಥ್ಯ ಮತ್ತು ಇತರ ಕೌಶಲ್ಯಗಳ ಕುರಿತು ಕೇಳಲಾಗುತ್ತದೆ.

16. ಪರೀಕ್ಷೆ ಮತ್ತು ಇಂಟರ್ವ್ಯೂ ಗೆ ಸಂಬಂಧಿಸಿದ ಇತರ ಮಾಹಿತಿಯನ್ನು ಸಾಂದರ್ಭಿಕವಾಗಿ ಆನ್‌ಲೈನ್ ಪೋರ್ಟಲ್ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಲಾಗುತ್ತದೆ.ಎಲ್ಲವನ್ನು ತಿಳಿದುಕೊಂಡು ಅನುಸರಿಸಬೇಕಾಗಿ ವಿನಂತಿ.

## -ಗ್ರೇಸ್ ಮಾರ್ಕ್

ಜಾಮಿಯಾ ಮಟ್ಟದ ಮಹಜ್ಜಾನ್, ರಾಜ್ಯ/ರಾಷ್ಟ್ರೀಯ ಸಾಹಿತ್ಯೋತ್ಸವ, IAME ರಾಜ್ಯ ಮಟ್ಟದ ಸ್ಪರ್ಧೆಗಳು, ರಾಜ್ಯ ಮಟ್ಟದ ಶಾಲಾ ಕಲೋತ್ಸವ, SMART ವಿದ್ಯಾರ್ಥಿವೇತನಗಳು, LSS, USS ಇತ್ಯಾದಿ ಪರೀಕ್ಷೆಗಳು, ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾರ್ಥಿವೇತನಗಳು ಮತ್ತು ಇತರ ರಾಷ್ಟ್ರೀಯ , ಅಂತರಾಷ್ಟ್ರೀಯ ಸ್ಪರ್ಧೆಗಳು ಇತ್ಯಾದಿಗಳನ್ನು ಗ್ರೇಸ್ ಅಂಕಗಳಿಗೆ ಪರಿಗಣಿಸಲಾಗುತ್ತದೆ. ಸ್ಪರ್ಧೆಗಳಲ್ಲಿ 1, 2 ಮತ್ತು 3 ನೇ ಸ್ಥಾನಗಳನ್ನು ಮಾತ್ರ ಪರಿಗಣಿಸಲಾಗುತ್ತದೆ. ಪ್ರತ್ಯೇಕವಾಗಿ ಅರ್ಜಿಯನ್ನು ಭರ್ತಿ ಮಾಡಿ ಇಂಟರ್ವ್ಯೂ ವೇಳೆ ನಿರ್ವಾಹಕರಿಗೆ ಮಾಹಿತಿ ನೀಡಿದವರಿಗೆ ಮಾತ್ರ ಗ್ರೇಸ್ ಅಂಕಗಳನ್ನು ನೀಡಲಾಗುತ್ತದೆ. ಜಾಮಿಯತುಲ್ ಹಿಂದ್ ಗುರುತಿಸಿದ ಕ್ಷೇತ್ರಗಳಲ್ಲಿನ ಸಾಧನೆಗಳಿಗೆ ಮಾತ್ರ ಗ್ರೇಸ್ ಅಂಕಗಳನ್ನು ನೀಡಲಾಗುತ್ತದೆ.



## ಅಲೋಟ್ಮೆಂಟ್

ಪ್ರಥಮ, ದ್ವಿತೀಯ ಮತ್ತು ಸ್ಪಾಟ್ ಅಲೋಟ್ಮೆಂಟ್ ಗಳು ನಿಗದಿತ ದಿನಾಂಕಗಳಲ್ಲಿ ನಡೆಯುತ್ತದೆ. ಸಂಧರ್ಭಕ್ಕೆ ತಕ್ಕಂತೆ ಆನ್‌ಲೈನ್ ಪೋರ್ಟಲ್ ಮೂಲಕ ವಿದ್ಯಾರ್ಥಿಗಳಿಗೆ ಅಲೋಟ್ಮೆಂಟ್ ಗಳ ಬಗ್ಗೆ ಮಾಹಿತಿ ಲಭ್ಯವಾಗುತ್ತದೆ.  ಸ್ಪಾಟ್ ಅಲೋಟ್‌ಮೆಂಟ್‌ನಲ್ಲಿ ಭಾಗವಹಿಸಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಸೀಟುಗಳ ಲಭ್ಯತೆಗನುಸಾರವಾಗಿ ಜಾಮಿಯತುಲ್ ಹಿಂದ್ ಕಚೇರಿಯ ಮೂಲಕ ಪ್ರವೇಶಾತಿಯನ್ನು ಅನುಮತಿಸಲಾಗುತ್ತದೆ.  ಮೊದಲ ಅಲೋಟ್ಮೆಂಟ್ ನಲ್ಲಿ ಪಡೆದ ಸಂಸ್ಥೆಯನ್ನು ಬದಲಾಯಿಸಿ ಎರಡನೇ ಅಲೋಟ್ಮೆಂಟ್ ಗೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.  ಎರಡನೇ ಅಲೋಟ್ಮೆಂಟನ್ನು ತಿರಸ್ಕರಿಸಲು ಅವಕಾಶವಿರುವುದಿಲ್ಲ.

## ಪ್ರವೇಶಾತಿ

ಅಲೋಟ್ಮೆಂಟ್ ನಲ್ಲಿ ಸೀಟು ಪಡೆದ ವಿದ್ಯಾರ್ಥಿಯು ಪ್ರವೇಶಾತಿ ಪಡೆಯಲು ತನ್ನ ಪೋಷಕರೊಂದಿಗೆ ಸಂಸ್ಥೆಗೆ ಖುದ್ದಾಗಿ ಭೇಟಿ ನೀಡಬೇಕು.  ಇದಕ್ಕಾಗಿ ನಿಗದಿಪಡಿಸಿದ ಟೈಂ ಶೆಡ್ಯೂಲನ್ನು ಪ್ರತ್ಯೇಕವಾಗಿ ಗಮನದಲ್ಲಿಟ್ಟಿರಬೇಕು.  ಅಡ್ಮಿಶನ್ ಸಮಯದಲ್ಲಿ ಸಲ್ಲಿಸಬೇಕಾದ ದಾಖಲೆಗಳ ಬಗ್ಗೆ ಮಾಹಿತಿಯನ್ನು ಆನ್‌ಲೈನ್ ಪೋರ್ಟಲ್ ಮುಖಾಂತರ ವಿದ್ಯಾರ್ಥಿಗೆ ತಿಳಿಸಲಾಗುತ್ತದೆ.

## ಮ್ಯಾನೇಜ್ಮೆಂಟ್ ಕೋಟಾ

ಪ್ರತಿಯೊಂದು ಸಂಸ್ಥೆಯು  ನಿರ್ದಿಷ್ಟ ಶೇಕಡಾವಾರು ಮ್ಯಾನೇಜ್ಮೆಂಟ್ ಕೋಟಾದ ಪ್ರವೇಶವನ್ನು ಹೊಂದಿರುತ್ತದೆ.ಪ್ರಸ್ತುತ ವಿದ್ಯಾರ್ಥಿಗಳು ಲಿಖಿತ ಪರೀಕ್ಷೆಯ ಮುಂಚಿತವಾಗಿ ಆಯಾ ಸಂಸ್ಥೆಗಳನ್ನು ಸಂಪರ್ಕಿಸಬೇಕು.  ಮ್ಯಾನೇಜ್‌ಮೆಂಟ್ ಕೋಟಾದಲ್ಲಿ ಪ್ರವೇಶ ಪಡೆಯಲು ಏಕ ಜಾಲಗ ವ್ಯವಸ್ಥೆಯ ಮೂಲಕ ಅರ್ಜಿ ಸಲ್ಲಿಸುವುದು ಮತ್ತು J-SAT ಪರೀಕ್ಷೆ ಬರೆಯುವುದು ಕಡ್ಡಾಯವಾಗಿದೆ. ಮ್ಯಾನೇಜ್‌ಮೆಂಟ್ ಕೋಟಾದಡಿಯಲ್ಲಿ ಪ್ರವೇಶ ನೀಡಲು ಪ್ರತೀ ಸಂಸ್ಥೆಗೂ ವಿಭಿನ್ನ ಷರತ್ತುಗಳನ್ನು ಅಳವಡಿಸಿಕೊಳ್ಳಬಹುದು,ಮ್ಯಾನೇಜ್‌ಮೆಂಟ್ ಕೋಟಾದಡಿಯಲ್ಲಿ ಒಂದು ಸಂಸ್ಥೆಯ ಮೂಲಕ ನೇರವಾಗಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಯನ್ನು ಮೊದಲ ಅಲೋಟ್ಮೆಂಟ್ ನಲ್ಲಿಯೇ ಆ ಸಂಸ್ಥೆಯಲ್ಲಿ ಪರಿಗಣಿಸಲಾಗುತ್ತದೆ.

## ಇತರ ಪ್ರಮುಖ ಸಲಹೆಗಳು

1. ಸಮಾಜವನ್ನು ಮುನ್ನಡೆಸುವಷ್ಟು ಸಮರ್ಥ ಧಾರ್ಮಿಕ ವಿದ್ವಾಂಸರನ್ನು ಹುಟ್ಟುಹಾಕುವುದು ಜಾಮಿಯತುಲ್ ಹಿಂದ್‌ನ ಧ್ಯೇಯವಾಗಿದೆ.  ಅದಕ್ಕನುಗುಣವಾಗಿ ವಿದ್ಯಾರ್ಥಿಗಳು ನಿಯಮಗಳು ಮತ್ತು ನಿಬಂಧನೆಗಳನ್ನು ಪಾಲಿಸಬೇಕಾಗಿ ಕೇಳಿಕೊಳ್ಳುತ್ತಿದ್ದೇವೆ.  ಪ್ರತಿಯೊಬ್ಬ ವಿದ್ಯಾರ್ಥಿಯೂ ಇವುಗಳನ್ನು ಸಂಪೂರ್ಣವಾಗಿ ಪಾಲಿಸಲು ಬದ್ಧನಾಗಿರುತ್ತಾನೆ.

2. ಸಮಸ್ತ ಕೇರಳ ಜಂಇಯ್ಯತುಲ್ ಉಲಮಾ ಕೇಂದ್ರ ಮುಶಾವರದ ನಿರ್ದೇಶನದಂತಾಗಿದೆ ಜಾಮಿಯತುಲ್ ಹಿಂದ್ ವ್ಯವಸ್ಥೆಯು ಮುನ್ನಡೆಯುತ್ತಿರುವುದು. ಪ್ರತಿಯೊಬ್ಬ ವಿದ್ಯಾರ್ಥಿಯು ಕಡ್ಡಾಯವಾಗಿ ಸಮಸ್ತದ ಆಶಯ ನಿರ್ದೇಶನಗಳನ್ನು ಪಾಲಿಸಿ ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

3. ಜಾಮಿಯತುಲ್-ಹಿಂದ್ ನ ಅಧೀನದಲ್ಲಿರುವ ಪ್ರತಿಯೊಂದು ಸಂಸ್ಥೆಗಳು ಶಿಸ್ತು ಮತ್ತು ಇನ್ನಿತರ ವಿಷಯಗಳಿಗೆ ಸಂಬಂಧಿಸಿದಂತೆ ವಿಭಿನ್ನ ನಿಯಮಗಳನ್ನು ಅಳವಡಿಸಿಕೊಂಡಿರುತ್ತದೆ ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಯೂ ಅವುಗಳನ್ನು ಅನುಸರಿಸಬೇಕಾಗಿದೆ.

4. ಧಾರ್ಮಿಕವಾಗಿ ಅಥವಾ ರಾಜ್ಯದ ಕಾನೂನಿನ  ಚೌಕಟ್ಟನ್ನು ಮೀರುವ ರೀತಿಯಲ್ಲಿ ವರ್ತಿಸಿದರೆ ಕಠಿಣ ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ಸಂಸ್ಥೆಯು ಹೊಂದಿದ್ದು ಸಾಂಸ್ಥಿಕ ನಿಯಮಗಳನ್ನು ಉಲ್ಲಂಘಿಸಿದರೂ ಕ್ರಮ ಕೈಗೊಳ್ಳಬಹುದು.

5. ಸಂಸ್ಥೆಯ ಕುರಿತಾದ ದೂರುಗಳನ್ನು ಸರಿಯಾದ ಸಮಯದಲ್ಲಿ ಜಾಮಿಯತುಲ್ ಹಿಂದ್ ಗೆ  ತಿಳಿಸುವ ಹಕ್ಕು ವಿದ್ಯಾರ್ಥಿಗಳಿಗಿದೆ.

6. ಪ್ರತಿಯೊಬ್ಬ ವಿದ್ಯಾರ್ಥಿಯು ಸಂಪೂರ್ಣ ಇಸ್ಲಾಮಿಕ್ ಪರಿಸರದಲ್ಲಿ ಬದುಕಬೇಕು.ಇಸ್ಲಾಮಿಕ್ ನಿಯಮಗಳನ್ನು ಅನುಸರಿಸುವುದರ ಜೊತೆಗೆ  ತಮ್ಮ ಪ್ರದೇಶದಲ್ಲಿರುವ ಇಸ್ಲಾಮಿಕ್ ಸುನ್ನಿ ವಿದ್ವಾಂಸರ ಯೂನಿಫಾರ್ಮನ್ನು ಅಳವಡಿಸಿಕೊಳ್ಳಬೇಕು .



## ವಿಶೇಷ ಗಮನಕ್ಕೆ

ಜೀವನದ ಅತಿದೊಡ್ಡ ಹೆಜ್ಜೆಯಾಗಿದೆ ಇದು. ಪ್ರತಿಯೊಬ್ಬ ವಿದ್ಯಾರ್ಥಿಯ ಅಭಿರುಚಿಯೂ ವಿಭಿನ್ನವಾಗಿರುತ್ತದೆ. ಸಂಸ್ಥೆಗಳು ಒದಗಿಸುವ ಸೌಲಭ್ಯಗಳು ಮತ್ತು ಕಲಿಕಾ ವ್ಯವಸ್ಥೆಗಳು ವ್ಯತಿರಿಕ್ತವಾಗಿರುತ್ತದೆ.ಪ್ರತಿಯೊಬ್ಬ ವಿದ್ಯಾರ್ಥಿ ಮತ್ತು ಪೋಷಕರು  ಪ್ರವೇಶ ಪಡೆಯಲು ಬಯಸುವ ಸಂಸ್ಥೆಯ ಕುರಿತು ಅರಿತುಕೊಳ್ಳುವುದು ಕಡ್ಡಾಯವಾಗಿದೆ.ಓಪ್ಶನ್ ಆಗಿ ಆಯ್ಕೆ ಮಾಡುವ ಸಂಸ್ಥೆಯ ಕುರಿತು ಚೆನ್ನಾಗಿ ತಿಳಿದುಕೊಂಡಾಗಿರಬೇಕು ಅಡ್ಮಿಶನ್ ಪ್ರಕ್ರಿಯೆಯೊಂದಿಗೆ ಮುಂದುವರೆಯುವುದು.ಸರಿಯಾಗಿ ಅನ್ವೇಷಿಸದೆ ಸಂಸ್ಥೆಯ ಕೋರ್ಸುಗಳು ಮತ್ತು  ಸೌಲಭ್ಯಗಳ ಕುರಿತು ನಂತರ ದೂರು ನೀಡಬಾರದು.ಅಂತಹ ದೂರುಗಳನ್ನು ಜಾಮಿಯತುಲ್ ಹಿಂದ್ ಪರಿಗಣಿಸುವುದಿಲ್ಲ.



ಆತ್ಮೀಯ ವಿದ್ಯಾರ್ಥಿಗಳೇ,

ಬಹಳ ದೊಡ್ಡ ಜವಾಬ್ದಾರಿಯ ಪ್ರಥಮ ಹಂತದಲ್ಲಿದ್ದೇವೆ ನಾವು.
ದೊಡ್ಡ ದೊಡ್ಡ ಕನಸುಗಳನ್ನು ಕಂಡು,ಅತ್ಯುತ್ತಮ ಶಿಕ್ಷಣವನ್ನು ಪಡೆದು
ನಮ್ಮ ಜೀವನವನ್ನು ಸಾರ್ಥಕಗೊಳಿಸುವ ಪ್ರಯಾಣವನ್ನು ಇಲ್ಲಿ ನಾವು
ಪ್ರಾರಂಭಿಸುತ್ತಿದ್ದೇವೆ.ಇಂದು ನಮ್ಮನ್ನು ಮುನ್ನಡೆಸುತ್ತಿರುವ ಎಲ್ಲಾ ಮಹಾ
ವಿದ್ವಾಂಸರು ಮತ್ತು ಅವರ ಪೂರ್ವಜ ವಿದ್ವಾಂಸರು  ಆಹೋರಾತ್ರಿ
ತ್ಯಾಗಗಳನ್ನು ಸಹಿಸಿಯಾಗಿತ್ತು ನಮಗೀ ಶಿಕ್ಷಣದ ಹಾದಿಯನ್ನು
ತೆರೆದಿಟ್ಟದ್ದು.ಆ ವಿಶ್ವಾಸವನ್ನು ಮನಸ್ಸಿನಲ್ಲಿಟ್ಟುಕೊಳ್ಳಿ.  ಪೂರ್ಣ
ನಂಬಿಕೆಯೊಂದಿಗೆ ಪ್ರವೇಶ ಪಡೆಯಿರಿ.ಜಾಗತಿಕ ವಿದ್ವಾಂಸರಾಗಿ ಬೆಳೆಯಿರಿ.
ಸಮೂಹವನ್ನು ಸರಿದಾರಿಯಲ್ಲಿ ನಡೆಸುವ ದೌತ್ಯ ನಮ್ಮ ಮುಂದಿದೆ.
ಅಲ್ಲಾಹನು ತೌಫೀಕ್ ನೀಡಲಿ - ಆಮೀನ್

**ನಿಮ್ಮ ಸಹಾಯಕ್ಕಾಗಿ:**

**+91 06235492844, 0495-2772844**

www.jamiathulhind.com

**Jamiathul Hind Al Islamiyya**
(An Initiative of Samastha Kerala Jamiyyatul Ulema)
Kozhikode, 0495-2772844, +916235492844